ಆಳಂದ ಪಟ್ಟಣದಲ್ಲಿ ಸಂಯುಕ್ತ ಕಿರಿಯ ಕಾಲೇಜು ಪ್ರಾರಂಭಿಸುವ ಬಗ್ಗೆ

೨೪೦೪. ಶ್ರೀ ಶರಣಬಸಪ್ಪಮಾಲಿ ಪಾಟೀಲ್ (ಆಳಂದ್) —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಳಂದ ಪಟ್ಟಣದಲ್ಲಿ ಹೆಣ್ಣಿನ ಮಕ್ಕಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಅನುಕೂಲವಾಗುವಂತೆ ಸಂಯುಕ್ತ ಕಿರಿಯ ಕಾಲೇಜು ಪ್ರಾರಂಭಿಸಲು ಸರ್ಕಾರದವರು ಯೋಚಿಸಿರುವರೆ ?

ಆ) ಆಳಂದ್ ಪಟ್ಟಣದಲ್ಲಿ ಪಂಹಮದೀಯ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಓದುತ್ತಿದ್ದು ಆಳಂದದಿಂದ ಹೊರಗೆ ಹೋಗಲು ಸಾಧ್ಯವಾಗದಿರುವುದರಿಂದ ಈ ಮೇಲ್ಕಂಡ ಸಂಯುಕ್ತ ಕಿರಿಯ ಕಾಲೇಜು ಅತ್ಯಾವಶ್ಯಕ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸಂಯುಕ್ತ ಕಿರಿಯ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಬಂದಿಲ್ಲ.

ಇ) ಪ್ರಶ್ನೆ ಉದ್ಭವಿಸದು.

ಮುಲ್ಲಾಮಾರಿ ಕೆಳದಂಡೆ ಯೋಜನೆ

೧೭೮೯. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಲ್ಲಾಮಾರಿ ಕೆಳದಂಡೆ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು ?

ಆ) ಇದರ ಮೂಲ ಅಂದಾಜು ವೆಚ್ಚವೆಷ್ಟು ?

ಇ) ಈ ಬಗ್ಗೆ ಮಾರ್ಚ್ ೧೯೮೮ರ ಕೊನೆಯವರೆಗೆ ಖರ್ಚು ಮಾಡಿದ ಮೊಬಲಗೆಷ್ಟು ?

ಈ) ಈಗಿನ ಹೊಸ ಅಂದಾಜು ವೆಚ್ಚವೆಷ್ಟು ?

ಉ) ಈವರೆಗೆ ಕಟ್ಟಿಡದ ಕಾಮಗಾರಿ ಯಾವ ಹಂತದಲ್ಲಿದೆ ?

ಊ) ಸದರಿ ನೀರಾವರಿ ಯೋಜನೆ ಯಾವಾಗ ಮುಗಿಯುವುದು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಬರಗಾಲ ಕಾರ್ಯಕ್ರಮದಲ್ಲಿ ೧೯೭೩-೭೪ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) ೮೭೬ ಲಕ್ಷ ರೂ.ಗಳು ಮೂಲ ಯೋಜನೆಯ ಅಂದಾಜಿಗೆ ಯೋಜನಾ ಆಯೋಗದ ಬಿಡುಗಡೆ ಪಡೆಯಲಾಗಿದೆ.

ಇ) ೪೨೫ ಲಕ್ಷ ರೂ.ಗಳು.

ಈ) ೧೯೮೫-೮೬ನೇ ಸಾಲಿನ ದರಪಟ್ಟಿಯ ಪ್ರಕಾರ ಅಂದಾಜು ೨೯೭೫ ಲಕ್ಷ ರೂ.ಗಳು.

ಉ) ಆಣೆಕಟ್ಟಿನ ಮಣ್ಣಿನ ಒಡ್ಡಿನ ಹಲವು ಭಾಗಗಳಲ್ಲಿ ಕೆಲಸ ಮಾಡಲಾಗಿದ್ದು, ಬಲದಂಡೆ ನಾಲೆಯು ಮೊದಲ ಭಾಗದಲ್ಲಿ ಕೆಲಸ ಪ್ರಗತಿಯಲ್ಲಿದೆ.

ಊ) ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ.